# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **640** |
| ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 20-02-2024 |
| ಉತ್ತರಿಸುವವರು | : | ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಹಟ್ಟಿ ಚಿನ್ನದ ಗಣಿ ಸಮೀಪದಲ್ಲಿರುವ ಗ್ರಾಮಗಳಲ್ಲಿ ಚಿನ್ನದ ನಿಕ್ಷೇಪ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಎಲ್ಲೆಲ್ಲಿ ಚಿನ್ನದ ನಿಕ್ಷೇಪ ಪತ್ತೆಯಾಗಿದೆ; (ವಿವರ ನೀಡುವುದು) | ಹಟ್ಟಿ ಚಿನ್ನದ ಗಣಿ ಸಮೀಪದಲ್ಲಿರುವ ಗ್ರಾಮಗಳಲ್ಲಿ ಚಿನ್ನದ ನಿಕ್ಷೇಪ ಇರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆ. ವಿವರ ಈ ಕೆಳಕಂಡಂತಿದೆ:<br>1) ಹಟ್ಟಿ ಉತ್ತರ – ಪಶ್ಚಿಮ್ ಬ್ಲಾಕ್<br>2) ತುಪ್ಪದೂರು ಉತ್ತರ ಬ್ಲಾಕ್<br>3) ತುಪ್ಪದೂರು ದಕ್ಷಿಣ ಬ್ಲಾಕ್<br>4) ಹಿರೇನಗನೂರು ಬ್ಲಾಕ್<br>5) ಊಟಿ ದಕ್ಷಿಣ ಬ್ಲಾಕ್<br>6) ಮಸ್ಕಿ – ಬುದ್ದಿನ್ನಿ ಬ್ಲಾಕ್<br>7) ಹೀರಾ-ಬುದ್ದಿನ್ನಿ ಪೂರ್ವ ಬ್ಲಾಕ್<br>8) ಮಸ್ಕಿ – ಸಾನಬಾಳ ಬ್ಲಾಕ್<br>9) ರೋಡಲಬಂಡಾ – ವಂದಲಿ ಬ್ಲಾಕ್<br>10) ವಡಗಲ್ - ಕಾಚಾಪುರ ಬ್ಲಾಕ್<br>11) ಚಿಂಚರಗಿ – ಬುಲ್ಲಾಪುರ ಬ್ಲಾಕ್ |
| (ಆ) | ಸದರಿ ಚಿನ್ನದ ನಿಕ್ಷೇಪಗಳ ಗಣಿಗಾರಿಕೆಗೆ ಸರ್ಕಾರ ತೆಗೆದುಕೊಂಡ ಕ್ರಮವೇನು; (ವಿವರ ನೀಡುವುದು) | ಎಂಎಂಡಿಆರ್ ತಿದ್ದುಪಡಿ ಕಾಯ್ದೆ 2015 ರನ್ವಯ ಯಾವುದೇ ನಿಕ್ಷೇಪಗಳನ್ನು ಗಣಿಗಾರಿಕೆಗೆ ನೀಡುವ ಪೂರ್ವದಲ್ಲಿ ಖನಿಜಾನ್ವೇಷಣೆ ಕೈಗೊಂಡು ಗಣಿ ಗುತ್ತಿಗೆ / ಸಂಯುಕ್ತ ಗಣಿ ಗುತ್ತಿಗೆಗಳನ್ನು ಹರಾಜು ಮೂಲಕ ವಿಲೇ ಮಾಡಬೇಕಾಗಿರುತ್ತದೆ.<br><br>ಈ ಸಂಬಂಧ ರಾಯಚೂರು ಜಿಲ್ಲೆಯಲ್ಲಿ ಖನಿಜಾನ್ವೇಷಣೆಗಾಗಿ ಬ್ಲಾಕ್‌ಗಳನ್ನು ಗುರುತಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. |

| | | |
|---|---|---|
| (ಇ) | ಸದರಿ ಚಿನ್ನದ ನಿಕ್ಷೇಪಗಳ ಗಣಿಗಾರಿಕೆಯನ್ನು ಖಾಸಗಿ ಕಂಪನಿಗೆ ವಹಿಸಲು ಉದ್ದೇಶಿಸಲಾಗಿದೆಯೇ; ಇಲ್ಲದಿದ್ದಲ್ಲಿ, ಸದರಿ ಗಣಿಗಾರಿಕೆಯನ್ನು ಹಟ್ಟಿ ಚಿನ್ನದ ಗಣಿ ಕಂಪನಿಗೆ ನೀಡಲು ಸರ್ಕಾರದ ಅಭಿಪ್ರಾಯವೇನು? (ವಿವರ ನೀಡುವುದು) | ಎಂಎಂಡಿಆರ್ ತಿದ್ದುಪಡಿ 2015ರ ಪೂರ್ವದಲ್ಲಿ ಖಾಸಗಿ ಕಂಪನಿಗಳು ಡೆಕ್ಕನ್ ಎಕ್ಸ್‌ಪ್ಲೋರೇಷನ್, ಜಿಯೋಮೈಸೂರು, ಆರ್‌ಎಂಎಂಪಿಎಲ್ ಮತ್ತು ಎಂಎಸ್‌ಪಿಎಲ್ ಕಂಪನಿಗಳು ಖನಿಜಾನ್ವೇಷಣೆ ಅರ್ಜಿಗಳನ್ನು ಸಲ್ಲಿಸಿದ್ದು, ಪ್ರಸ್ತುತ, ಈ ಅರ್ಜಿಗಳು ಅನರ್ಹವಾಗಿರುತ್ತದೆ. ಕೆಲವು ಕಂಪನಿಗಳು ತಮಗೆ ಖನಿಜಾನ್ವೇಷಣೆ ಮಂಜೂರು ಮಾಡಬೇಕೆಂದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆಗಳನ್ನು ದಾಖಲಿಸಿಕೊಂಡಿರುತ್ತವೆ.<br><br>ಆದರೆ, ಎಂಎಂಡಿಆರ್ ತಿದ್ದುಪಡಿ ಕಾಯ್ದೆ 2015 ಮತ್ತು ತದನಂತರ ತಿದ್ದುಪಡಿಯನ್ನು ಖನಿಜಾನ್ವೇಷಣೆ ಮತ್ತು ಗಣಿ ಗುತ್ತಿಗೆ ಮಂಜೂರಾತಿಯನ್ನು ಹರಾಜು ಪ್ರಕ್ರಿಯೆ ಮೂಲಕ ನಿರ್ವಹಿಸಬೇಕಾಗಿರುತ್ತದೆ.<br><br>ರಾಜ್ಯದ ವಿವಿದೆಡೆ ಈವರೆಗೆ 04 ಚಿನ್ನದ ಬ್ಲಾಕ್‌ಗಳನ್ನು ಸಂಯುಕ್ತ ಗಣಿ ಗುತ್ತಿಗೆಗಾಗಿ ಹರಾಜು ಮೂಲಕ ವಿಲೇ ಮಾಡಲಾಗಿರುತ್ತದೆ. ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br><br>ಎಂಎಂಡಿಆರ್ ಕಾಯ್ದೆ 1957 ರ 17ಎ ರಡಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಗಣಿಗುತ್ತಿಗೆಗಾಗಿ ಖನಿಜ ಪ್ರದೇಶಗಳನ್ನು ಕಾಯ್ದಿರಿಸಲು ಅವಕಾಶವಿರುತ್ತದೆ. ಅದರಂತೆ ಹಟ್ಟಿ ಚಿನ್ನದ ಗಣಿ ಕಂಪನಿ ಸಂಸ್ಥೆಯು ಈ ಕೆಳಕಂಡ ಪ್ರದೇಶಗಳಲ್ಲಿ ಗಣಿಗಾರಿಕೆ ಪ್ರದೇಶವನ್ನು ಕಾಯ್ದಿರಿಸಲು ಅರ್ಜಿಯನ್ನು ಸಲ್ಲಿಸಿರುತ್ತಾರೆ.<br>1) ಹಟ್ಟಿ ಉತ್ತರ – ಪಶ್ಚಿಮ್ ಬ್ಲಾಕ್<br>2) ತುಪ್ಪದೂರು ಉತ್ತರ ಬ್ಲಾಕ್<br>3) ತುಪ್ಪದೂರು ದಕ್ಷಿಣ ಬ್ಲಾಕ್<br>4) ಹಿರೇನಗನೂರು ಬ್ಲಾಕ್<br>5) ಊಟಿ ದಕ್ಷಿಣ ಬ್ಲಾಕ್<br>6) ಮಸ್ಕಿ – ಬುದ್ದಿನ್ನಿ ಬ್ಲಾಕ್<br>7) ಹೀರಾ-ಬುದ್ದಿನ್ನಿ ಪೂರ್ವ ಬ್ಲಾಕ್<br>8) ಮಸ್ಕಿ – ಸಾನಬಾಳ ಬ್ಲಾಕ್<br>9) ರೋಡಲಬಂಡಾ – ವಂದಲಿ ಬ್ಲಾಕ್<br>10) ವಡಗಲ್ - ಕಾಚಾಪುರ ಬ್ಲಾಕ್<br>11) ಚಿಂಚರಗಿ – ಬುಲ್ಲಾಪುರ ಬ್ಲಾಕ್<br><br>ಮೇಲ್ಕಂಡ ಅರ್ಜಿಗಳು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಪರಿಶೀಲನಾ ಹಂತದಲ್ಲಿದೆ. |

ಸಂಖ್ಯೆ:ಸಿಐ 15 ಸಿಎಂಸಿ 2024

**(ಎಸ್. ಎಸ್. ಮಲ್ಲಿಕಾರ್ಜುನ)**
**ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು**

## ಅನುಬಂಧ – 1

| Sl. No. | Name of the Mines | Extent in Ha. | District | Resource in MMT | NIT Date | Date of Auction | ML / CL | Successful Bidder |
|---|---|---|---|---|---|---|---|---|
| 1 | Ajjanahalli Gold Block | 949.00 | Tumakuru | 5.55 | 30.12.2021 | 28.03.2022 | CL | Kundan Care Products |
| 2 | Belaghatta Gold Block | 2501.58 | Chitradurga | Not Estimated | 30.12.2021 | 30.03.2022 | CL | PM Granite Exports Pvt. Ltd. |
| 3 | Basavanagudda Gold Block | 2501.9 | Tumakuru & Chitradurga | Not Estimated | 31.01.2023 | 21.08.2023 | CL | R. K. Transport Co. |
| 4 | Timmanahalli Gold Block | 2000.00 | Tumakuru | Not Estimated | 16.03.2023 | 16.09.2023 | CL | Ore Geo Exploration India Ltd. |